# ಚಿತ್ರದುರ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
## ಸ್ಪೆಷಲ್ ಕೇಸ್(ಪಿ.ಸಿ) ಸಂಖ್ಯೆ: 06/2016

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಡಿ. ಬಸವರಾಜಣ್ಣ | **ಪಿಡಬ್ಲ್ಯೂ.14** |
| **ತಂದೆಯ ಹೆಸರು** | : | ದ್ಯಾಮಪ್ಪ | **ಸಿಡಬ್ಲ್ಯೂ.34** |
| **ವಯಸ್ಸು** | : | **58 ವರ್ಷ** | **ಪ್ರಮಾಣ ವಚನ ಬೋಧಿಸಿದ** |
| **ಉದ್ಯೋಗ** | : | ಸಹಾಯಕ ಕಾರ್ಯಪಾಲಕ ಇಂಜಿಯರ್ , ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹಿರಿಯೂರು | **ದಿನಾಂಕಃ 11.12.2018** |
| **ವಾಸಸ್ಥಳ** | : | ಹಿರಿಯೂರು . | |

## ಎಸ್‌ಪಿಪಿ ರವರಿಂದಃ ಮುಖ್ಯ ವಿಚಾರಣೆಃ

ದಿಃ 30.06.2014 ರಿಂದ 18.08.2014 ರವರೆಗೆ ನಾನು ಹಿರಿಯೂರಿನ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ . ಆ ವೇಳೆಯಲ್ಲಿ ಪ್ರಭಾರೆ ಇಂಜಿನಿಯರ್ ಅಂತ ಕೆಲಸ ಮಾಡಿರುತ್ತೇನೆ . ಆ ಸಮಯದಲ್ಲಿ ದಿಃ **11.06.2014** ರಂದು ಚಿತ್ರದುರ್ಗ ಲೋಕಾಯುಕ್ತ ಪೊಲೀಸರು ನಮ್ಮ ಕಛೇರಿಗೆ ಪತ್ರ ಬರೆದು ಹಿರಿಯೂರು ತಾಲ್ಲೂಕು ಹೂವಿನಹೊಳೆ ಗ್ರಾಮದ ಸರ್ವೆ ನಂ . **62/1, 62/2** ಮತ್ತು ಈಶ್ವರಗೇರಿ ಗ್ರಾಮದ ಸರ್ವೆ ನಂ . **126/4** ಜಮೀನಿನಲ್ಲಿರುವ ಬೋರ್ , ಕಲ್ಲು ಕಂಬ , ಮುಳ್ಳು ತಂತಿ ಇವುಗಳ ಖರ್ಚು ವೆಚ್ಚದ ಮಾಹಿತಿ ಕೇಳಿ ಪತ್ರ ಬರೆದಿದ್ದರು . ಸದರಿ ಪತ್ರವನ್ನು ನಿಪಿ–**24** ಅಂತ ಗುರುತಿಸಲಾಯಿತು . ಆ ಪ್ರಕಾರ ನಾನು ದಿಃ **26.07.2014** ರಂದು ಆರೋಪಿ–**1** ರಾಜಣ್ಣ ಇವರಿಗೆ ಸಂಬಂಧಿಸಿದ ಹೂವಿನಹೊಳೆ ಗ್ರಾಮದ ಸರ್ವೆ ನಂ . **62/2** ಜಮೀನಿಗೆ ಭೇಟಿ ಕೊಟ್ಟು ನೋಡಲಾಗಿ ಅಲ್ಲಿ ಅಡಿಕೆ , ತೆಂಗಿನ ಬೆಳೆ ಇತ್ತು . ಅಲ್ಲಿ **3** ಕೊಳವೆ ಬಾವಿ ಕೊರೆಸಿದ್ದು ಕಂಡು ಬಂದಿತ್ತು . ಅದೇ ರೀತಿ **6** ಎಕರೆ ಜಮೀನಿನ ಸುತ್ತಲೂ **5** ಅಡಿ ಎತ್ತರದ ಕಲ್ಲಿನ ಕಂಬ ಉಪಯೋಗಿಸಿ ಜಮೀನಿನ ಸುತ್ತಲೂ ಮುಳ್ಳು ತಂತಿ ಬೇಲಿ ಹಾಕಿದ್ದರು .

**2**. ಆ ಎಲ್ಲಾ ಸ್ಥಳಗಳನ್ನು ಮತ್ತು ವಿಷಯವನ್ನು ಪರಿಶೀಲಿಸಿ ಈ ರೀತಿ ಖರ್ಚು ಮಾಡಿದ ವಿವರ ಕಂಡು ಕೊಂಡಿರುತ್ತೇನೆ .

| ಕ್ರ. ಸಂ. | ಖರ್ಚು ಮಾಡಿದ ಬಾಬತ್ತು ವಿವರ | ಖರ್ಚು ರೂಪಾಯಿ |
|---|---|---|
| 1 | 3 ಬೋರ್ ವೆಲ್ ಹಾಕಿದ ಬಗ್ಗೆ ಖರ್ಚು | 3,74,715/- |
| 2 | 6 ಎಕರೆ ಜಮೀನಿನ ಸುತ್ತಲೂ ತಂತಿ ಬೇಲಿ | 2,38,962/- |
| | ಒಟ್ಟು | 6,13,677/- |

ಸದರಿ ವರದಿಯನ್ನು ನಿಪಿ–25 ಅಂತ ಗುರುತಿಸಲಾಯಿತು . ಸದರಿ ಬೋರ್ ವೆಲ್ , ತಂತಿ ಬೇಲಿ , ಇತ್ಯಾದಿ ಖರ್ಚುಗಳನ್ನು ಚಿತ್ರದುರ್ಗ ಜಿಲ್ಲಾ ಮಾರುಕಟ್ಟೆ ದರದಂತೆ ಲೆಕ್ಕಚಾರ ತೆಗೆದುಕೊಂಡು ನಾನು ಮೊತ್ತ ಕಂಡುಕೊಂಡಿರುತ್ತೇನೆ .

## ಆರೋಪಿತರ ಪರ ಶ್ರೀ ಎಸ್.ಹೆಚ್. ವಕೀಲರಿಂದಃ ಪಾಟೀ ಸವಾಲುಃ

3. ನಾನು ಸದರಿ ಹೂವಿನಹೊಳೆ ಗ್ರಾಮದ ಜಮೀನಿಗೆ ಖುದ್ದಾಗಿ ಭೇಟಿ ಕೊಟ್ಟಿರುತ್ತೇನೆ . ನಾನು ಸ್ಥಳಕ್ಕೆ ಹೋಗುವುದಕ್ಕಿಂತ ಪೂರ್ವದಲ್ಲಿ ಆರೋಪಿಗೆ , ಅವನ ಸಹೋದರರಿಗೆ , ಆ ಜಮೀನಿನಲ್ಲಿ ಉಳಿದ ಭೂಮಿಯ ಮಾಲೀಕರಿಗೆ ನೋಟೀಸ್ ಕೊಟ್ಟಿರುವುದಿಲ್ಲ . ಅಂದು ದಿಃ 26.07.2014 ರಂದು ಸರ್ವೆ ನಂ .62/2 ನೇದಕ್ಕೆ ಹೋದ ಸಮಯದಲ್ಲಿ ಪಂಚರ ಸಮಕ್ಷಮ ಮಹಜರ್ ಮಾಡಿರುವುದಿಲ್ಲ . ಅಲ್ಲಿ ಜಮೀನಿಗೆ ಹೋದಾಗ ಆಜುಬಾಜು ಜನರನ್ನು ಕರೆಸಿ ಹೇಳಿಕೆ ಪಡೆದುಕೊಂಡಿರುವುದಿಲ್ಲ . ಸದರಿ ಬೋರ್ ವೆಲ್ , ತಂತಿ ಬೇಲಿ ಇವುಗಳನ್ನು ಯಾವಯಾವ ವರ್ಷ ಹಾಕಿದ್ದಾರೆ ಅಂತ ದಾಖಲೆ ತರಿಸಿ ನೋಡಿರುವುದಿಲ್ಲ . ಬೋರ್ ವೆಲ್ ಖುದ್ದಾಗಿ ಯಾರು ಹಾಕಿಸಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ . ಅದೇ ರೀತಿ ತಂತಿ ಬೇಲಿಯನ್ನು ಖುದ್ದಾಗಿ ಯಾರು ಹಾಕಿಸಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ .

4. ಬೋರ್ವೆಲ್‌ನ ಆಳವನ್ನು ನಾನು ಅಂದಾಜು ಮೇರೆಗೆ ಲೆಕ್ಕ ತೆಗೆದುಕೊಂಡಿದ್ದೇನೆ , ಏಕೆಂದರೆ ನಾನು ಸ್ಥಳಕ್ಕೆ ಹೋದಾಗ ಮೊಟರ್ ಕೊಳವೆ ಬಾವಿ ಒಳಗೆ

ಇತ್ತು . ಹೀಗಾಗಿ ಉದ್ದ ಅಳತೆ ಮಾಡಲು ಆಗುವುದಿಲ್ಲ . ಸಾಮಾನ್ಯವಾಗಿ ಆ ಪ್ರದೇಶದಲ್ಲಿ ಸುಮಾರು 250 ರಿಂದ 300 ಅಡಿ ಆಳದ ಬಾವಿ ಕೊರೆಸುತ್ತಾರೆ . 3 ಕೊಳವೆ ಬಾವಿಯ ಆಳ ನಿಖರವಾಗಿ ಎಷ್ಟು ಅಂತ ಹೇಳಲು ಬರುವುದಿಲ್ಲ . ಆ 3 ಕೊಳವೆ ಬಾವಿಗೆ ಯಾವ ಕಂಪನಿಯ ಕೇಸಿಂಗ್ ಪೈಪ್ ಹಾಕಿದ್ದಾರೆ , ಅದಕ್ಕೆ ನಿಖರವಾಗಿ ಎಷ್ಟು ಹಣ ಖರ್ಚು ಮಡಿದ್ದಾರೆ ಅಂತ ಹೇಳಲು ಬರುವುದಿಲ್ಲ . ಸದರಿ 3 ಕೊಳವೆ ಬಾವಿಗೆ ಅಂದಾಜು ತಲಾ ರೂ.30,000/– ರಿಂದ ರೂ.35,000/– ವೈರಿಂಗ್ ಇತ್ಯಾದಿ ಖರ್ಚು ಆಗುತ್ತದೆ . ಕೇಸಿಂಗ್ ಪೈಪ್ ಗೆ ಬೇರೆ ಖರ್ಚು ಆಗುತ್ತದೆ . ಬೆಸ್ಕಾಂ ಕಛೇರಿಗೆ ಡೆಪಾಸಿಟ್ , ಸರ್ವೀಸ್ ಚಾರ್ಜ್ ಗೆ ಎಷ್ಟು ಹಣ ಕಟ್ಟಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ .

5. ಸರ್ವೆ ನಂ . 62/2 ಜಮೀನಿನ ಸುತ್ತಳತೆಯನ್ನು ಟೇಪ್ ಹಿಡಿದು ನಾನು ಅಳತೆ ಮಾಡಿಲ್ಲ . ಲೋಕಾಯುಕ್ತ ಪೊಲೀಸರ ಮಾತು ಕೇಳಿ ನಾನು ಹೆಚ್ಚಿನ ಮೊತ್ತದ ವರದಿ ಕೊಟ್ಟಿದ್ದೇನೆ ಎನ್ನುವುದು ಸುಳ್ಳು . ಅಂದು ನಾನು ಸರ್ವೆ ನಂ .62/2 ಕ್ಕೆ ಹೋಗಿಲ್ಲ ಎನ್ನುವುದು ಸುಳ್ಳು . ನಿಪಿ–25 ವರದಿಯನ್ನು ನಾನು ಕಛೇರಿಯಲ್ಲಿ ಸೃಷ್ಟಿ ಮಾಡಿದ್ದೇನೆ ಎನ್ನುವುದು ಸುಳ್ಳು .

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿ ಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಎಸ್.ಬಿ. ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.